Geetha Shishu Shikshana Sangha (R)
# GSSS SIMHA SUBBAMAHALAKSHMI FIRST GRADE COLLEGE
KRS ROAD, MYSURU-570 016

ಯಶಸ್ YASHAS SSFGC Weekly Newsletter

Volume -2 | Issue No 43 | 15 March 2020

## ಪ್ರಗತಿ ಸಲ್ಯೂಷನ್ಸ್‌ಗೆ ಐವರು ವಿದ್ಯಾರ್ಥಿಗಳು ಆಯ್ಕೆ

ಸೇಫಿಯಂಟ್ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:13.03.2020ರಂದು ನಡೆದ ಆವರಣ ಸಂದರ್ಶನಕ್ಕೆ (Campus Interview) ಅಂತಿಮ ಬಿ.ಕಾಂನ ಐದು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇವರಲ್ಲಿ ಐದು ವಿದ್ಯಾರ್ಥಿಗಳು ಪ್ರಗತಿ ಐಟಿ ಸಲ್ಯೂಷನ್ಸ್‌ಗೆ ಆಯ್ಕೆಗೊಂಡಿರುತ್ತಾರೆ. ಇವರನ್ನು ಕಾಲೇಜಿನ ಆಡಳಿತ ಮಂಡಳಿ, ನಿರ್ದೇಶಕರು, ಪ್ರಾಂಶುಪಾಲರು ಮತ್ತು ಬೋಧಕ ವರ್ಗ ಅಭಿನಂದಿಸಿದ್ದಾರೆ.







ಜೆ.ಎಸ್.ಎಸ್.ಎಸ್ ಮಹಿಳಾ ಎಂಜಿನಿಯರಿಂಗ್ ಕಾಲೇಜಿನಲ್ಲಿ ದಿನಾಂಕ:12.03.2020ರಂದು ನಡೆದ ಆವರಣ ಸಂದರ್ಶನಕ್ಕೆ ( Campus Interview) ಅಂತಿಮ ಬಿ.ಕಾಂ ವಿದ್ಯಾರ್ಥಿಗಳೆಲ್ಲರೂ ಪಾಲ್ಗೊಂಡಿದ್ದರು.

ವ್ಯವಹಾರ ನಿರ್ವಹಣ ವಿಭಾಗದ ಮುಖ್ಯಸ್ಥರಾದ ಪ್ರೊ. ಸುಬ್ರಮಣ್ಯ ಅವರು ಆವರಣ ಸಂದರ್ಶನಕ್ಕೆ ವಿದ್ಯಾರ್ಥಿಗಳು ವ್ಯಕ್ತಿಗತ ವಿವರವನ್ನು ಸಿದ್ಧಪಡಿಸುವ ಬಗೆ, ಸಂದರ್ಶನವನ್ನು ಎದುರಿಸುವುದು ಅವರ ವೇಷಭೂಷಣಗಳು ಮೊದಲಾದವುಗಳ ಕುರಿತು ವಿದ್ಯಾರ್ಥಿಗಳನ್ನು ಸಿದ್ಧಪಡಿಸಿದರು.

* * * * *

## ಅಗ್ರಿ ಕಾಮ್ ಮತ್ತು ಸಾಮಾಜಿಕ ವ್ಯವಹಾರದಿಂದ 'ಕಸಾವ' ಕೃಷಿ ಪರಿಚಾಲನೆ



ದಕ್ಷಿಣ ಆಫ್ರಿಕಾ ಮೂಲದ ಸಸ್ಯ ಪ್ರಭೇದದ ಆಹಾರ ಬೆಳೆ ಕಸಾವ. ಭಾರತದ ದಕ್ಷಿಣ ರಾಜ್ಯಗಳಲ್ಲಿ ಒಂದಾದ ಕೇರಳದ ಪ್ರಮುಖ ಆಹಾರ ಬೆಳೆಗಳಲ್ಲಿ ಒಂದಾಗಿದೆ. ಹಾಗೂ ಆದಾಯದ ಮೂಲವನ್ನಾಗಿಸಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಎಲ್ಲ ರಾಜ್ಯಗಳಲ್ಲೂ ಈ ಬೆಳೆ ಪ್ರಮುಖ ವಾಣಿಜ್ಯ ಬೆಳೆಯಾಗಿಯೂ ಹೊರಹೊಮ್ಮಿದೆ. ವಿಶ್ವದ ಮೂರನೆಯ ಮುಖ್ಯ ಶರ್ಕರ ಪಿಷ್ಟದ ಆಹಾರ ಮೂಲವೆಂದು ಹೇಳಬಹುದಾಗಿದೆ. ಇದನ್ನು ನೀರಿನ ಆಶ್ರಯವಿಲ್ಲದೇ, ಮಳೆ ಆಶ್ರಿತ ಮತ್ತು ಬರ ಪ್ರದೇಶಗಳಲ್ಲೂ ಬೆಳೆಯಬಹುದು. ವಿಶ್ವದ ಅತಿದೊಡ್ಡ ಉತ್ಪಾದಕ ರಾಷ್ಟ್ರವೆಂದರೆ ನೈಜೀರಿಯಾ. ನಮ್ಮ ಕಾಲೇಜಿನ ಆವರಣದಲ್ಲಿ Agree Com Add-on Course, ಸಾಮಾಜಿಕ ವ್ಯವಹಾರ ಮತ್ತು ರಾ. ಸೇ.ಯೋ ವತಿಯಿಂದ 'ಕಸವ' ಬೇಸಾಯವನ್ನು, ಕಸವ ಕಾಂಡಗಳ ತುಂಡನ್ನು ನೆಡುವುದರ ಮೂಲಕ ಸಾಂಕೇತಿಕವಾಗಿ ಆರಂಭಿಸಲಾಯಿತು. ಕಾಲೇಜಿನ ನಿರ್ದೇಶಕರು, ರಾ.ಸೇ.ಯೋ ಅಧಿಕಾರಿ ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರು ಹಾಗೂ ಸ್ವಯಂಸೇವಕರುಗಳು ಹಾಜರಿದ್ದರು.



# ಭಾನುವಾರ ಜನತಾ ಕರ್ಫ್ಯೂ– ಪ್ರಧಾನಿ ಮೋದಿ



ಕೊರೊನಾ ವೈರಸ್ ಸೊಂಕು ತಗಲದಂತೆ ಪ್ರತಿಯೊಬ್ಬರೂ ಎಷ್ಟು ಸಾಧ್ಯವೋ ಅಷ್ಟು ನಿಗಾವಹಿಸಬೇಕು. ಜನರು ಸಾಧ್ಯವಾದಷ್ಟು ಮನೆಯ ಒಳಗೆ ಉಳಿಯಬೇಕು. ಮನೆಯಿಂದಲೇ ಕೆಲಸ ಮಾಡಲು ಯತ್ನಿಸಬೇಕು. ಕೊರೊನಾದಷ್ಟು ತೀವ್ರವಾದ ಅಪಾಯವನ್ನು ಜಗತ್ತು ಎಂದೂ ಕಂಡೇ ಇರಲಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ಇಡೀ ದೇಶ ಜನತಾ ಕರ್ಫ್ಯೂ ಹೇರಿಕೊಳ್ಳಬೇಕು. ಅಂದು ಬೆಳಿಗ್ಗೆ 7ರಿಂದ ರಾತ್ರಿ 9ರವರೆಗೆ ತುರ್ತು ಸೇವೆಗಳನ್ನು ನಿರ್ವಹಿಸುವವರನ್ನು ಬಿಟ್ಟು ಬೇರೆ ಯಾರೂ ಮನೆಯಿಂದ ಹೊರಗೆ ಬರಬಾರದು ಎಂದು ಪ್ರಧಾನಿ ಕರೆ ಕೊಟ್ಟಿದ್ದಾರೆ.

ಭಾರತವನ್ನು ಆರೋಗ್ಯವಾಗಿ ಇರಿಸುವುದಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವ ಜನರಿಗೆ (ವೈದ್ಯರು, ನರ್ಸಗಳು, ಅರೆ ವೈದಕೀಯ ಸಿಬ್ಬಂದಿ, ವಿಮಾನ ನಿಲ್ದಾಣ ಸಿಬ್ಬಂದಿ, ಭದ್ರತಾ ಪಡೆ ಸಿಬ್ಬಂದಿ, ಮಾಧ್ಯಮ ಸಿಬ್ಬಂದಿ ಮುಂತಾದವರು)ಧನ್ಯವಾದ ಅರ್ಪಿಸಲು ಈ ಅವಕಾಶ ಬಳಸಿಕೊಳ್ಳಿ. ಭಾನುವಾರ ಸಂಜೆ ಐದು ಗಂಟೆಗೆ ನಿಮ್ಮ ಮನೆಯ ಕಿಟಕಿ, ಬಾಗಿಲ ಬಳಿ ಅಥವಾ ಬಾಲ್ಕನಿಯಲಲಿ ನಿಂತು ಚಪ್ಪಾಳೆ ತಟ್ಟಿ ಎಂದು ಮೋದಿ ಕೋರಿದ್ದಾರೆ.

ಕೃಪೆ : ಪ್ರಜಾವಾಣಿ

* * * * *



ಕೊರೊನಾ ವೈರಸ್ ಪ್ರಯುಕ್ತ ರಾಷ್ಟ್ರದಾಂದ್ಯತ ಮುನ್ನೆಚ್ಚರಿಕಾ ಕ್ರಮವಾಗಿ ತುರ್ತುಘೋಷಣೆ ಮಾಡಿರುವುದರಿಂದ ಕರ್ನಾಟಕ ರಾಜ್ಯ ಸರ್ಕಾರ ಮಾರ್ಚ್ 14 ರಿಂದ 31 ಮಾರ್ಚ್‌ವರೆಗೆ ಎಲ್ಲ ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡಿರುವುದರಿಂದ, ಕಾಲೇಜು ಶಿಕ್ಷಣ ಇಲಾಖೆಯ ಆದೇಶದಂತೆ ವಿದ್ಯಾರ್ಥಿಗಳಿಗೆ ರಜೆ ಘೋಷಣೆ ಮಾಡಲಾಗಿದೆ.


GSSS SIMHA SUBBAMAHALAKSHMI FIRST GRADE COLLEGE

* * * * *

## ಎರಡನೇ ಕಿರು ಪರೀಕ್ಷೆ ಆರಂಭ

ಎರಡನೇ ಕಿರು ಪರೀಕ್ಷೆಗಳು ದಿನಾಂಕ: 11.03.2020ರಂದು ಆರಂಭಗೊಂಡವು, ಮೊದಲ ಹಂತದಲ್ಲಿ ಪ್ರಥಮ ಬಿಸಿಎ ತರಗತಿಯ ಕಿರು ಪರೀಕ್ಷೆಗಳು ಮೂರು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

* * * * *

## ಸಾಂಸ್ಕೃತಿಕ ವರದಿ

ದಿನಾಂಕ: 13.03.2020ರಂದು ಜಿ.ಎಸ್.ಎಸ್.ಎಸ್ ಮಹಿಳಾ ಎಂಜಿನಿಯರಿಂಗ್ ಕಾಲೇಜಿನ ವ್ಯವಹಾರ ಆಡಳಿತ ನಿರ್ವಹಣಾ ವಿಭಾಗ ಆಯೋಜಿಸಿದ 'ಪ್ರಯಾಗ' ಒಂದು ದಿನದ ಸಾಂಸ್ಕೃತಿಕ ಹಬ್ಬದಲ್ಲಿನ ಸೌಂದರ್ಯ ಪ್ರದರ್ಶನದಲ್ಲಿ ಸುಮಾರು 8 ವಿದ್ಯಾರ್ಥಿನಿಯರು, ರಸ ಪ್ರಶ್ನೆ ಸ್ಪರ್ಧೆಯಲ್ಲಿ 4, ನಿಧಿ ಹುಡುಕಾಟ ಸ್ಪರ್ಧೆಯಲ್ಲಿ 4 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.






## ಕರೊನಾ ವೈರಸ್ ಬಗ್ಗೆ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಗಳಿಂದ ಮುನ್ನೆಚ್ಚರಿಕ ಕ್ರಮ

Dear member of GSSS family,



Keeping in step with the efforts of our governments both at the Center and the state to contain the spread of the deadly corona virus , the management of GSSS has taken measures t o ensure sensitization of staff belonging to all cadres about the dangers of the disease.

**Apart from an orientation session to class 4 employees today afternoon**, we have procured and installed hand sanitizers at all entry points to the institution such as the receptionist desk, admin office, and hostel office and hostel mess.

Hand wash solution shall be made available at all washrooms used by staff by forenoon tomorrow. We shall extend this to students wash rooms once they resume college.

We have procured these products from world renowned Schevaran labs in order to ensure quality protection of all employees from the virus.

THERE WILL BE HAND SANITIZER KEPT AT THE BIOMETRIC, YOU ARE URGED TO USE IT BEFORE YOU TOUCH THE BIOMETRIC TO LOG IN AND AGAIN USE IT BEFORE YOU TOUCH THE BIOMETRIC FOR LOGGING OUT.

WE HAVE KEPT HAND SANITIZER AT THE RECEPTION TO ENSURE OUTSIDERS VISITING US DISINFECT THEMSELVES WITHOUT FAIL BEFORE THEY MEET ANYONE IN OUR CAMPUS.

I URGE EACH ONE OF YOU TO CO OPERATE IN USING THE SANITIZER AND HAND WASH WITH CARE AND IN A JUDICIOUS MANNER IN ORDER TO ENSURE SAFETY OF YOUR COLLEAGUES AS WELL AS YOUR OWN FAMILIES.
Let us stand united and support the government in our own small way in fighting the spread of this deadly virus.

May the blessings of Lord Parameshwara and Mother Chamundeswari be on all of us and our families during these testing times.
THANKS!!

Anupama B.Pandit
Administrative Officer

* * * * *

## ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರೊಂದಿಗೆ ಸೌಹಾರ್ದ ಭೇಟಿ



ಕರ್ನಾಟಕ ಸರ್ಕಾರ ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ವಲಯದ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಪ್ರೊ. ಮೂಗೇಶಪ್ಪ ಅವರನ್ನು ಕಾಲೇಜಿನ ನಿರ್ದೇಶಕರಾದ ಡಾ. ಕೆ.ವಿ.ಪ್ರಭಾಕರ ಮತ್ತು ಪ್ರಾಂಶುಪಾಲರಾದ ಪ್ರೊ. ಕೆ.ಯು.ಬಸಪ್ಪ ಅವರುಗಳು ಸೌಹಾರ್ದಯುತವಾದ ಭೇಟಿಮಾಡಿದರು. ಇದೇ ಸಂದರ್ಭದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಹಲವಾರು ಯೋಜನೆಗಳು, ಪ್ರಗತಿದಾಯಕ,ಸಂಯೋಜಿತ ಚಟುವಟಿಕೆಗಳು ಹಾಗೂ ಕೆಲವು ಆಡಳಿತಾತ್ಮಕ ವಿಚಾರಗಳನ್ನು ಚರ್ಚಿಸಿದರು. ಕಾಲೇಜು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ನಮ್ಮ ಕಾಲೇಜಿನಲ್ಲಿ ನಡೆದ 'ಪರಿಣಾಮಕಾರಿ ಅಧ್ಯಾಪನ' ಕಾರ್ಯಗಾರಕ್ಕೆ ಪ್ರೋತ್ಸಾಹ ನೀಡಿದಕ್ಕೆ ಆಡಳಿತ ಮಂಡಲಿಯ ಪರವಾಗಿ ನಿರ್ದೇಶಕರು ಮತ್ತು ಪ್ರಾಂಶುಪಾಲರು ಕೃತಜ್ಞತೆಗಳನ್ನು ಸಲ್ಲಿಸಿದರು.

* * * * *

## ಜಯಲಕ್ಷ್ಮಿದೇವಿ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರು, ಪ್ರಾಂಶುಪಾಲರೊಂದಿಗೆ ಸೌಹಾರ್ದ ಮತ್ತು ಪ್ರವರ್ತನಾ ಭೇಟಿ

ಮುಂದಿನ ಶೈಕ್ಷಣಿಕ ವರ್ಷದ ಪ್ರವರ್ತನಾ ವಿಷಯವಾಗಿ ಕಾಲೇಜಿನ ನಿರ್ದೇಶಕರಾದ ಡಾ.ಕೆ.ವಿ.ಪ್ರಭಾಕರ ಮತ್ತು ಪ್ರಾಂಶುಪಾಲರಾದ ಪ್ರೊ. ಕೆ.ಯು.ಬಸಪ್ಪ ಅವರು ಜಯಲಕ್ಷ್ಮಿದೇವಿ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾದ ಪ್ರೊ. ವಿ.ಎನ್. ನಾಯಕ್ ಮತ್ತು ಪ್ರಾಂಶುಪಾಲರೊಂದಿಗೆ ಭೇಟಿ ಮಾಡಿ ವಿದ್ಯಾರ್ಥಿಗಳೊಂದಿಗೆ ಸಂವಾದವನ್ನು ನಡೆಸಿದರು. ಹಾಗೂ ಸಂಸ್ಥೆ ಸಂಸ್ಥೆಗಳ ನಡುವಿನ ಹಲವಾರು ಪ್ರಗತಿದಾಯಕವಾದ ವಿಚಾರಗಳನ್ನು ಕುರಿತು ಚರ್ಚಿಸಿದರು.



* * * * *

**ಹೆಮ್ಮಾರಿಯ ಹೆಡೆಮುರಿ ಕಟ್ಟಿ**

ಜಗದ ಹೆಮ್ಮಾರಿ ಕರೋನ
ಆಕಾರ ವಿಕಾರವಾಗಿ . . . .
ರೂಪರಹಿತ ಜೀವ ಹಿಂಡುವ ಕರಾಳ ರೂಪಿ ಹೆಮ್ಮಾರಿ
ಇಗೋ ! ಬಂದಿಹಳು . . . .
ಯಮಪಾಶವಿಡಿದು, ಹೆಬ್ಬಾಗಿಲಲಿ ನಿಂದಿಹಳು. . . . .
ಭಯಪಡದಿರಿ ಅನುಜರಿರ , ಭಯಪಟ್ಟರೆ
ಹೊತ್ತೊಯ್ಯುವಳು ಕಾಯವನು
ಮಸಣದೆಡೆಗೆ. . . . . ಅವಳನ್ನೇ ಹಿಮ್ಮೆಟ್ಟಿಸಲು
ಸಕಲ ಸನ್ನದ್ಧರಾಗಿ ಮುಂದಡಿಯಿಡುವಿರಾ . . . . .!
ಹೆಮ್ಮಾರಿಯ ಹೆಡೆಮುರಿ ಕಟ್ಟಲು.

ವಿಶ್ವವನ್ನೇ ಹಿಂಡುತ್ತಿದೆ, ತಡೆಯುವವರು ಯಾರು ?
ಮನುಜರಿರ ಭಯ ಬೇಡ, ತಡೆಯುವವರು ನಾವೇ
ಅರಿಯದಿರುವಿರ. . . ಬಹಳ ಸರಳ ಸುಲಭೋಪಾಯ
ಕರಗಳ ಶುಚಿತ್ವ ಗಂಟೆಗೊಮ್ಮೆ, ಸೋಂಕಿತರಿಂದ
ಮಾರುದೂರವಿದ್ದು, ಗೃಹವಾಸ ಆಶ್ರಯಿಸಿದರೆ
ಅದುವೇ ಶುಶ್ರೂಷೆ . . . .

ಮದ್ದಿನ ಚಿಂತೆ ನಮಗ್ಯಾಕೆ ಮನುಜರಿರಾ ?
ಮದ್ದಿಗಿಂತಲೂ ಸ್ವಚ್ಚತೆ ಮೊದಲಲ್ಲವೇ ಅನುಜರಿರಾ
ಮದ್ದಿನ ಯೋಚನೆ ನಂತರವೇ . . .
ಮದ್ದು ಪಡೆದರೂ ನಿವಾರಣೆಯೇ ಈ ಜಗದ ಹೆಮ್ಮಾರಿ . . .?
ನಮ್ಮ ನಿಮ್ಮಲ್ಲಿ ಮೊದಲ ಮದ್ದು, ಮುಖಗವಸ
ಶುಶ್ರೂಷೆಯ ಮದ್ದು ಯಾವುದು ?
ಸುರಕ್ಷತೆಯಲ್ಲವೇ ಮೊದಲ ಮದ್ದು.

ಈ ಮಾರಿಗಿಲ್ಲವೇ. . . ಮದ್ದು ?
ಸೋಂಕಿತರುಗಳ ಗೃಹವಾಸದಿಂದ ಪಡೆಯಬಹುದಯ್ಯಾ
ಮಿತವಾದ ಮದ್ದು, ಸೋಂಕಿತರು ಮಾಡದಿರಿ
ಹೆಮ್ಮಾರಿಯ ಉತ್ಸವದ ಸವಾರಿ.
ನೂಕದಿರಿ . . . ನೂಕದಿರಿ . . . ಭಯದ ಪಾಶಕ್ಕೆ
ಭಯದ ಮೃತ್ಯು ನರ್ತನಕೆ !

**ಮಹದೇವ ಕೆ.ಎಂ**

ಸತ್ಯದೊಂದಿಗೆ ಸುಳ್ಳನ್ನು ಸೇರಿಸ ಬೇಡಿ. ತಾವು ಸ್ವತಃ ಪ್ರಾಮಾಣಿಕತೆಯನ್ನು ಅಳವಡಿಸಿ ಕೊಂಡ ಮೇಲೆ ಇತರರಿಗೆ ಪ್ರಾಮಾಣಿಕತೆಯನ್ನು ಅಳವಡಿಸಿಕೊಳ್ಳಲು ಹೇಳಿ.

ಕೃಪೆ : ಕುರಾನ್ (2.44)

**Chief Editor**

Prof K U Basappa, Principal
**Executive Editor**
Mr Mahadeva K M., HOD, Dept of Kannada
Mr Subramanya K R, HOD, Dept of BBA
Mr Sampath Kumar , Librarian
**Photo courtesy**
Dr. Prabhakara K V, Priyanka M N
Prof Anil M, Namith P

**P HOTO CORNER**

